ಸಾಕ್ಷಿಯನ್ನು 15.06.2023 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಪಿ.ಡಬ್ಲ್ಯೂ-1

ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದಃ

1. ದಾವಾ ಆಸ್ತಿಯನ್ನು ನಾನು 2014 ನೆ ಇಸವಿಯಲ್ಲಿ ನೋಡಿರುತ್ತೇನೆ. ಕ್ರಯದ ಕರಾರು ಪತ್ರ ಆಗುವ 8 ದಿನಗಳ ಹಿಂದೆ ನೋಡಿರುತ್ತೇನೆ. ಆ ಸಮಯದಲ್ಲಿ ದಾವಾ ಆಸ್ತಿ ಪಾಳು ಜಮೀನು ಇತ್ತು. ದಾವಾ ಆಸ್ತಿಯಲ್ಲಿ ಯಾವ ಯಾವ ಮರಗಳಿತ್ತು ನಾನು ನೋಡಿಲ್ಲ. ಯಾವ ತರಹದ ಮರಗಳನ್ನು ಪ್ರತಿವಾದಿಗಳು ಹಾಕಿದ್ದರು ಎಂದು ನಾನು ನೋಡಿಲ್ಲ. ದಾವಾ ಆಸ್ತಿಯನ್ನು ನನ್ನ ಅತ್ತೆ ನನ್ನನ್ನು ಕರೆದುಕೊಂಡು ಬಂದು ತೋರಿಸಿದ್ದರು. ಸಾಕ್ಷಿ ಸ್ವತಃ ತನ್ನ ಅತ್ತೆ ದಾವಾ ಆಸ್ತಿಯನ್ನು ಕ್ರಯಕ್ಕೆ ಬರಸಿಕೊಳ್ಳಲು ತಯಾರಿರುವುದಿಲ್ಲ ಎಂದು ಹೇಳಿ, ಕ್ರಯಪತ್ರವನು ನೀನೆ ಬರಸಿಕೊ ಎಂದು ತಿಳಿಸಿದ್ದರು ಎಂದು ಹೇಳಿರುತ್ತಾರೆ. ನನ್ನ ವಾದಪತ್ರದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಅತ್ತೆ ಕರಾರುಪತ್ರವನ್ನು ಮಾಡಿಕೊಂಡಿರುವ ವಿಚಾರ ಮತ್ತು ನನಗೆ ಕ್ರಯಪತ್ರ ಬರೆಸಿಕೊ ಎಂದು ಹೇಳಿದ ವಿಚಾರವನ್ನು ತಿಳಿಸಿರುವುದಿಲ್ಲ. ನಾನು ಬರಸಿಕೊಂಡಿರುವ ಕರಾರು ಪತ್ರಕ್ಕೆ ನನ್ನ ಅತೆಯನ್ನು ಸಾಕ್ಷಿಯನ್ನಾಗಿ ತೋರಿಸಲು ಏನು ತೊಂದರೆ ಇರಲಿಲ್ಲ. ನನ್ನ ಅತ್ತೆ ಬರೆಸಿಕೊಂಡಿರುವ ಕರಾರು ಪತ್ರವನ್ನು , ನಾನು ಜಮೀನುನ್ನು ತೆಗೆದುಕೊಳ್ಳಲು ಆಗುತ್ತಿಲ್ಲ , ನನ್ನ ಸೋದರಳಿಯ ತೆಗೆದುಕೊಳ್ಳುತ್ತಾನೆ ಎಂದು ಬರಸಿ ಕರಾರು ಪತ್ರವನ್ನು ರದ್ದುಪಡಿಸಿರುವುದಿಲ್ಲ. ನನ್ನ ಅತ್ತೆ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುವ ವಿಚಾರ ನನಗೆ 2014 ರಲ್ಲಿ ತಿಳಿದಿರುತ್ತದೆ. ನನ್ನ ಅತ್ತೆ ಎಷ್ಟು ಬೆಲೆಗೆ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತೆ ಪ್ರತಿವಾದಿಗಳಿಗೆ ಕೊಟ್ಟಂತಹ ಸಾಲವನ್ನು ಅವರು ತೀರಿಸಿದ್ದರಿಂದ ಕರಾರು ಪತ್ರವನ್ನು

ರದ್ದುಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅತ್ತೆ ಪ್ರತಿವಾದಿಗಳಿಂದ ಸಾಲವನ್ನು ತಿರುವಳಿಮಾಡಿಸಿಕೊಂಡು ನನ್ನಿಂದ ಇನ್ನೊಂದು ಕರಾರು ಪತ್ರವನ್ನು ಪ್ರತಿವಾದಿಗಳಿಗೆ ಸಾಲ ಕೊಟ್ಟಿರುವ ಬಗ್ಗೆ ಬರೆಸಿದ್ದಾರೆ ಎಂದರೆ ಸರಿಯಲ್ಲ.

2. ಪ್ರತಿವಾದಿಗಳಿಗೆ ಒಟ್ಟು 1 ಎಕರೆ 39 ಗುಂಟೆ ಜಮೀನು ಇದೆ. ಅದನ್ನು ಹೊರತುಪಡಿಸಿ ಪ್ರತಿವಾದಿಗಳಿಗೆ ಬೇರೆ ಜಮೀನು ಇದೆಯೊ ಇಲ್ಲವೊ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಚಕ್ಕುಬಂದಿಯನ್ನು ಜಮೀನಿನ ಆರ್ ಟಿ ಸಿ ಯನ್ನು ನೋಡಿ ಬರೆಸಿರುತ್ತೇನೆ. ನನ್ನ ಅತ್ತೆ 2 ಲಕ್ಷ ಸಾಲದ ಹಣದಲ್ಲಿ 1,75,000/- ಹಣವನ್ನು ನನ್ನ ಮೂಲಕ ಪ್ರತಿವಾದಿಗಳಿಗೆ ನಿಪಿ 1 ದಾಖಲೆ ಮೂಲಕ ಕೊಡಿಸಿ ಅವರು ಬರಸಿಕೊಂಡಿದ್ದ ನಿಡಿ 1 ದಾಖಲೆಯನ್ನು ರದ್ದುಪಡಿಸಿಕೊಳ್ಳುವುದಕ್ಕೋಸ್ಕರ ನಿಪಿ 1 ದಾಖಲೆಯನ್ನು ಬರಸಿರುತ್ತಾರೆ ಎಂದರೆ ಸರಿಯಲ್ಲ.

3. ನಿಪಿ 1 ಕರಾರು ಪತ್ರ ಆದ ದಿನ ನನ್ನಬಳಿ 380000/- ಲಕ್ಷ ಹಣ ಇತ್ತು ಎಂದು ತೋರಿಸಲು ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ 380000/- ಹಣವನ್ನು ಕೊಡವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆಯ ಲೇವಾದೇವಿ ವ್ಯವಹಾರದ 2ನೇ ಭಾಗವಾಗಿ ನಿಪಿ 1ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಪ್ರತಿವಾದಿಗಳು ಜೀವನ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿ ಹೊರತುಪಡಿಸಿ ಪ್ರತಿವಾದಿಗಳಿಗೆ ವ್ಯವಸಾಯ ಮಾಡಲು ಮತ್ತು ಜೀವನಕ್ಕೆ ಯಾವುದೇ ಜಮೀನು ಇರದೆ ಇರುವುದರಿಂದ ನಿಪಿ 1 ರಂತೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬನ್ನೂರು ಟೌನ ಮೈಸೂರು ಜಿಲ್ಲೆಯಲ್ಲಿ ಇರುವುದರಿಂದ ಮಳವಳ್ಳಿಯಲ್ಲಿ ಜಮೀನು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಾನು ಮೀನು ವ್ಯಾಪಾರ , ತರಕಾರಿ ವ್ಯಾಪಾರ ಮಾಡುತ್ತಿರುವುದರಿಂದ ವ್ಯವಸಾಯದ ಜಮೀನು ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯಗಾರ ಎಂದು ತೊರಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ನಿಪಿ 1ರಲ್ಲಿರುವ ಮೂರ್ತಿ , ರಾಮು , ಶಂಕರೆಗೌಡ ರವರು ನನಗೆ ಪರಿಚಯ ಎಂದರೆ ಸಾಕ್ಷಿ ಅವರು ಸಾಕ್ಷಿದಾರರು ಮಾತ್ರ ಚೆನ್ನಾಗಿ ಪರಿಚಯ ಇಲ್ಲ. ಮೂರ್ತಿ ಎಂಬುವವರು ನಮ್ಮ ಊರಿನವರೆ ಆಗಿರುತ್ತಾರೆ. ನಾನು ಮತ್ತು ಮೂರ್ತಿ ಸ್ನೇಹಿತರು ಎಂದರೆ ಸುಳ್ಳು. ಪತ್ರಬರಹಗಾರ ಶಂಕರೆಗೌಡ ಕೂಡ ನಮ್ಮೂರಿನವರೆ ಎಂದರೆ ಸರಿ.

4. ನನ್ನ ಬಳಿ ಉಳಿಕೆ 20 ಸಾವಿರ ಹಣ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳಿಗೆ ನೋಟಿಸು ಕಳುಹಿಸಿರುವುದನ್ನು ಹೊರತುಪಡಿಸಿ ದಿಃ10.9.2014 ರಿಂದ 15.7.2017 ರವರೆಗೆ 3 ವರ್ಷದ ಅವದಿಯಲ್ಲಿ ಪ್ರತಿವಾದಿಗಳ ಬಳಿ ಕ್ರಯಪತ್ರ ಬರೆದುಕೊಡಿ ಎಂದುಕೇಳಿರುವ ಬಗ್ಗೆ ಮತ್ತು ನಾನು ಕ್ರಯಪತ್ರ ಬರಸಿಕೊಳ್ಳಲು ತಯಾರಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳಿಗೆ ದಿಃ 15.7.2017 ರಂದು ನೋಟಸು ನೀಡುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ನೋಟಿಸು ನೀಡಿ ದಾವಾ ಹಾಕಲು ತೊಂದರೆ ಇರಲಿಲ್ಲ. ನಾನು ಪ್ರತಿವಾದಿಗಳಿಗೆ ಬಡ್ಡಿ ಸಾಲ ಕೊಟ್ಟಿದ್ದರಿಂದ 3 ವರ್ಷಗಳವರೆಗೆ ಅವರಿಂದ ಬಡ್ಡಿ ಪಡೆದುಕೊಂಡು ಸುಮ್ಮನಿದ್ದೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದ ಅವಧಿ 9 ನೆ ತಿಂಗಳಿನಲ್ಲಿ ಮುಗಿದು ಹೋಗುತ್ತದೆ ಎಂದು ಕಾರಣದಿಂದ ದಿಃ 15.7.2017 ರಂದು ನೋಟಿಸು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಡ್ಡಿಗೆ ಕೊಟ್ಟಿರುವ ಸಾಲದ ಹಣಕ್ಕೆ ತೊಂದರೆ ಆಗುತ್ತದೆ ಎಂದು ನೋಟಿಸು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ನಾನು ನ್ಯಾಯಾಲಯಕ್ಕೆ ನಾನು ಕೊಟ್ಟಿರುವ ಹಣವನ್ನು ಬಡ್ಡಿಸಮೇತ ವಾಪಾಸು ಕೊಡಿ ಎಂದು ಪ್ರಾರ್ಥಿಸಿದ್ದೀಯ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದಾರೆ. ಪ್ರತಿವಾದಿಗಳು ನ್ಯಾಯಾಲಯದಲ್ಲಿ ಹಾಜರಾದ ದಿನದಿಂದಲು ಅವರು ಪಡೆದುಕೊಂಡ 2 ಲಕ್ಷ ಹಣ ಮತ್ತು ಬಾಕಿ ಬಡ್ಡಿಯನ್ನು ನೀಡಲು ತಯಾರಿದ್ದಾರೆ ಎಂದರೆ ಸಾಕ್ಷಿ ನನಗೆ ಜಮೀನನ್ನೆ ಬರೆದುಕೊಡಬೇಕು ಎಂದು ನುಡಿದಿದ್ದಾರೆ. 380000/- ಹಣವನ್ನು ಪ್ರತಿವಾದಿಗಳಿಗೆ ಬ್ಯಾಂಕ್ ಖಾತೆ ಮೂಲಕ ನನಗೆ ತೊಂದರೆ ಇತ್ತು ಏಕೆಂದರೆ ಅಷ್ಟು ಹಣವನ್ನು ನಾನು ನನ್ನ ಬಳಿ ಕೂಡಿ ಇಟ್ಟಿದ್ದೆ. ಸದರಿ ಹಣದಲ್ಲಿ ಸ್ವಲ್ಪ ಹಣವನ್ನು ನಾನು ಕೂಡಿ ಇಟ್ಟಿದ್ದೆ , ಸ್ವಲ್ಪ ಹಣವನ್ನು ಕೈ ಸಾಲ ಮಾಡಿದ್ದೆ ಇನ್ನು ಸ್ವಲ್ಪ ಹಣ ನನ್ನ ಅಣ್ಣನ ಬಳಿ ಪಡೆದುಕೊಂಡಿದ್ದೆ. ಕೈ ಸಾಲ ಎಷು ಮತ್ತು ನನ್ನ ಅಣ್ಣನ ಬಳಿ ಎಷ್ಟು ಪಡೆದುಕೊಂಡಿದ್ದೆ ನನಗೆ ನೆನಪಿಲ ಕ್ರಯದ ಕರಾರು ಪತ್ರ ಆಗಿದೆ ಎಂದು ಹೇಳುವ ದಿನದಲ್ಲಿ ಅದರಲ್ಲಿ ತೋರಿಸಿರುವ 380000/- ಹಣ ನನ್ನ ಬಳಿ ಇರಲಿಲ್ಲ ಎಂದರೆ ಸಾಕ್ಷಿ ನಾನು ಸ್ವಲ್ಪ ಕೂಡಿಟ್ಟುದ್ದು ಮತ್ತು ಸ್ವಲ್ಪ ಕೈಸಾಲದ ಹಣ ಇತ್ತು ಎಂದು ನುಡಿದಿದ್ದಾರೆ. ನಾನು ಕೈಸಾಲ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ನನ್ನ ಅತ್ತೆ ಕೊಟ್ಟಿರುವ ಸಾಲದ ಭದ್ರತೆಗೆ ನಿಪಿ 1 ನ್ನು ಬರಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿ ಖರೀದಿ ಮಾಡುವ ಉದ್ದೇಶ ಇರಲಿಲ್ಲ , ಪ್ರತಿವಾದಿಗಳಿಗೆ ದಾವಾ ಆಸ್ತಿ ಮಾರಾಟ

ಮಾಡುವ ಉದ್ದೇಶ ಕೂಡ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕ್ರಯದ ಕರರು ಪತ್ರದಲ್ಲಿ ಬರೆದಿರುವ ಶರತ್ತಿನಂತೆ ಈ ದಾವೆಯನ್ನು ಹಾಕಿದ್ದೀರ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದಾರೆ. ನಾನ೨ ನಿಪಿ 1 ರ ಶರತ್ತಿನ ತದ್ವಿರುದ್ದವಾಗಿ ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ನೋಟಿಸು ಜಾರಿ ಮಾಡಿದನಂತರ 2017 ರಲ್ಲಿ ಪ್ರತಿವಾದಿಗಳು ಕರಾರು ಪತ್ರವನ್ನು ರದ್ದುಪಡಿಸಿ ನಿಮ್ಮ ಹಣವನು ಹಿಂತಿರುಗಿಸುತ್ತೇವೆ ಎಂದು ನನ್ನ ಬಳಿ ತಿಳಿಸಿದ್ದರು ಎಂದರೆ ಸರಿಯಲ್ಲ. ಹೇಗಾದರು ಮಾಡಿ ದಾವಾ ಆಸ್ತಿಯನ್ನು ಪ್ರತಿವಾದಿಗಳಿಂದ ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ನಡೆದಿರುವ ನಿಜವಾದ ಸಾಲದ ವ್ಯವಹಾರವನ್ನು ನ್ಯಾಯಾಲಯಕ್ಕೆ ತಿಳಿಸದೆ ಸುಳ್ಳು ವಾದಪತ್ರ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ